

ಭಾರತ–ಇರಾನ್ ದೇಶಗಳ ಸಾಂಸ್ಕೃತಿಕ ಕೊಡುಕೊಳುವಿಕೆ ಪುರಾತನವಾದದ್ದು. ಪರ್ಶಿಯನ್ ಕಾವ್ಯದ ಗಂಧ ಕನ್ನಡ ನಾಡಿನಲ್ಲಿ ಸಾಕಷ್ಟು ಪಸರಿಸಿದೆ. ಅನುಭಾವಿ ಕವಿಗಳಾದ ಉಮರ್ ಖಯ್ಯಾಮ್ ಮತ್ತು ಜಲಾಲುದ್ದೀನ್ ರೂಮಿ ಅವರ ಕಾವ್ಯ ಕನ್ನಡ ಲೇಖಕರ ಅನುವಾದಗಳಿಂದ ಇಲ್ಲಿನ ಸಾಹಿತ್ಯಾಸಕ್ತರನ್ನು ಮುಟ್ಟಿದೆ. ಹಾಗೆಯೇ ಕವಿ ಹಫೀಜ್ ಕೂಡ ಇಲ್ಲಿ ಪರಿಚಿತನೇ. ಕಾವ್ಯ, ತತ್ವಜ್ಞಾನದ ಜಿಜ್ಞಾಸೆಯ ನಾಡಿನಲ್ಲಿ ಸಿನಿಮಾ ಮಾಧ್ಯಮ ಕೂಡ ಅಂತಹುದೇ ಕಾವ್ಯಾತ್ಮಕ ಗುಣವನ್ನು ಮೈಗೂಡಿಸಿಕೊಂಡಿದೆಯಲ್ಲದೆ, ಸಮಸ್ಯೆಗಳ ಜಟಿಲತೆಯನ್ನು ಅವಲೋಕಿಸುವ ತಾತ್ವಿಕ(ಕೆಲವೊಮ್ಮೆ ಅಮೂರ್ತವಾಗಿ) ಗುಣವನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ ಸಿನಿಮಾದ ಸೃಜನಶೀಲ ಕ್ರಿಯೆಗೆ ವಿರುದ್ಧವಾಗಿ ಅಲ್ಲಿನ ಸರ್ಕಾರ ಹೇರಿರುವ ಸಾಕಷ್ಟು ಸೆನ್ಸಾರ್/ನಿರ್ಬಂಧಗಳು ಸಿನಿಮಾ ಮೂಡಿಬರುವ ಪರಿಸರವನ್ನು, ಅದರಲ್ಲಿ ತೊಡಗಿಸಿಕೊಳ್ಳುವವರ ಕ್ರಿಯಾಶೀಲತೆಯನ್ನು ಪ್ರಭಾವಿಸಿವೆ. ವಾಸ್ತವಕ್ಕೆ ಕನ್ನಡಿ ಹಿಡಿಯುವ ಸಿನಿಮಾಗಳು ಹೆಚ್ಚೆಚ್ಚು ಮೂಡಿಬರುತ್ತಿರುವುದು, ಸಿನಿಮಾದ ಪ್ರಧಾನ ವಸ್ತು ಕಾವ್ಯದ ರೂಪವನ್ನು ತಾಳುವುದು ಅಥವಾ ಅಮೂರ್ತವಾದ ತಾತ್ವಿಕ ಜಾಡನ್ನು ಹಿಡಿಯುವುದು ಇದೇ